**ಓ ಎಸ್ 9/2021 ಪಿಡಬ್ಲ್ಯೂ 1**

**ಸಾಕ್ಷಿಯನ್ನು ದಿಃ 14.08.2025 ರಂದು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲುಃ 6 ನೇ ಪ್ರತಿವಾದಿ ಪರ ಶ್ರೀ ಎನ್ ಎಂ ಜಿ ವಕೀಲರಿಂದಃ**

ಮೂರೂ ಜನರಿಗೆ ಸೇರಬೇಕು ಎಂಬುದಕ್ಕೆ ಸಂಬಂಧಿಸಿದಂತೆ ನಮ್ಮ ವಕೀಲರಿಗೆ ಆರ್ ಟಿ ಸಿ ಗಳನ್ನು ನೀಡಿದ್ದೇನೆ. ಸದರಿ ಆರ್ ಟಿ ಸಿ ಯು ಈ ದಾವೆ ಹೂಡಿದ ನಂತರ ಆಸ್ತಿತ್ವಕ್ಕೆ ಬಂದು ಜಂಟಿ ಖಾತೆ ನಮೂದು ಆಗಿದೆ ಎಂದರೆ ಸರಿಯಲ್ಲ. ನಿಶಾನೆ ಪಿ 1 ಎ ಆರ್ ಟಿ ಸಿ ಪ್ರಕಾರ ಅದರಲ್ಲಿನ ಸ್ವತ್ತು ಸಣ್ಣಮ್ಮ ಕೋಂ ಕರಿಯಪ್ಪ ಎಂಬುವವರ ಹೆಸರಿನಲ್ಲಿ ಇದೆ ಎಂದರೆ ಸರಿ. ಸರ್ವೆ ನಂ. 75/4 ವಿಸ್ತೀರ್ಣ 1 ಎಕರೆ 01 ಗುಂಟೆಗೆ ಸಂಬಂಧಿಸಿದ ಆರ್ ಟಿ ಸಿ ಯು ಸಹ ಸಣ್ಣಮ್ಮ ಕೋಂ ಕರಿಯಪ್ಪ ಎಂಬುವವರ ಹೆಸರಿನಲ್ಲಿ ಇದೆ ಎಂದರೆ ಸರಿ. ಸರ್ವೆ ನಂ. 72 ರ ಆಸ್ತಿಯು ಸಹ ಸಣ್ಣಮ್ಮ ಕೋಂ ಕರಿಯಪ್ಪ ಎಂಬುವವರ ಹೆಸರಿನಲ್ಲಿ ಇದೆ ಎಂದರೆ ಸರಿ.

ಒಳಚರಂಡಿ ಉದ್ದೇಶಕ್ಕಾಗಿ ಭೂ ಸ್ವಾಧೀನ ಆಗಿರುವ ಸಂಗತಿಯು ನಿಶಾನೆ ಪಿ 14 ರಲ್ಲಿನ ಎಂ ಆರ್ ನಲ್ಲಿ ನಮೂದು ಆಗಿದೆ ಎಂದರೆ ಸರಿ. ನಿಶಾನೆ ಪಿ 19 ರಲ್ಲಿನ ಆರ್ ಟಿ ಸಿ ಯಲ್ಲಿ ಕೋರ್ಟ ಆದೇಶದ ಮೇರೆಗೆ ಎಂ ಆರ್ ನ ಬದಲಾವಣೆಯಾಗಿದೆ ಎಂದು ನಮೂದು ಆಗಿದೆ ಎಂದರೆ ಸರಿಯಲ್ಲ.

ನಾನು ಹುಟ್ಟುವ ಮೊದಲೇ ಮೌಖಿಕವಾಗಿ ವಿಭಾಗ ಆಗಿದೆ. ಚಂದ್ರೆ ಗ್ರಾಮದ ಹೆಂಚಿನ ಮನೆ ಪೂರ್ತಾ ಹಾಗೂ ಸರ್ವೆ ನಂ. 87/2 ಹಾಗೂ 88/1 ರ ಜಮೀನುಗಳು ಪೂರ್ತಾ ನಮ್ಮ ತಂದೆಗೆ ಕೊಟ್ಟಿದ್ದಾರೆ ಎಂದರೆ ಸರಿ. ಹಾಗೆಯೇ ಕೆರೆ ಹೊಲ ಎಂದು ಹೇಳಿ ಸರ್ವೆ ನಂ. 41 ರಲ್ಲಿ 25 ಗುಂಟೆ ನಮ್ಮ ತಂದೆಗೆ ಕೊಟ್ಟಿದ್ದಾರೆ ಎಂದರೆ ಸರಿ. ಸದರಿ 25 ಗುಂಟೆ ಜಮೀನನ್ನು ದೇವೇಗೌಡರ ಹೆಂಡತಿ ಸುಶೀಲಮ್ಮರವರಿಗೆ ನಾನು, ನನ್ನ ತಂದೆ ಮತ್ತು ನಮ್ಮ ತಾಯಿ ಎಲ್ಲರೂ ಸೇರಿ ಮಾರಾಟ ಮಾಡಿದ್ದೇವೆ ಎಂದರೆ ಸರಿ. ಸಂಕಹಳ್ಳಿ ಬೋರೆ ಹೊಲ ಸರ್ವ ನಂ. 41 ರಲ್ಲಿ 1 ಎಕರೆ 27 ಗುಂಟೆ ಜಮೀನು ನಮ್ಮ ತಂದೆಗೆ

ಬಂದಿದೆ ಎಂದರೆ ಆ ಹೊಲವನ್ನು ಬೊರೆ ಹೊಲ ಎಂದು ಕರೆಯುತ್ತಿರಲಿಲ್ಲ, ಆದರೂ ಆ ಜಮೀನು ನಮ್ಮ ತಂದೆಗೆ ಬಂದಿದೆ ಎಂಬುದು ನಿಜ. ಸರ್ವೆ ನಂ. 86 ರಲ್ಲಿ 1 ಎಕರೆ 23 ಗುಂಟೆ ಜಮೀನು ಸಹ ನಮ್ಮ ತಂದೆಗೆ ಕೊಟ್ಟಿದ್ದಾರೆ ಎಂದರೆ ಸರಿ. ಆ ಜಮೀನನ್ನು ಗಂಟೆ ಹೊಲ ಎಂದು ಕರೆಯುತ್ತಾರೆ ಎಂದರೆ ಸರಿಯಲ್ಲ. ಆ ಜಮೀನನ್ನು ರಾಮೇಗೌಡರ ಹೆಂಡತಿ ರಾಜಮ್ಮರವರಿಗೆ ನಾವು ಮಾರಾಟ ಮಾಡಿದ್ದೇವೆ ಎಂದರೆ ಸರಿ. ಈ ಜಮೀನುಗಳುಲ್ಲದೆ ಕಣದ ಹೊಲದಲ್ಲಿ ನಮ್ಮ ತಂದೆಗೆ 1/3 ನೇ ಭಾಗ ನೀಡಿದ್ದಾರೆ ಎಂದರೆ ಸರಿ. ನಮ್ಮ ಅಜ್ಜ ಮತ್ತು ಅಜ್ಜಿ ಬದುಕಿದ್ದ ಕಾಲದಲ್ಲಿ ನಮ್ಮ ತಂದೆಯ ಪಾಲಿಗೆ ಈ ಮೇಲೆ ಹೇಳಿದ ಆಸ್ತಿಗಳನ್ನು ನೀಡಿದ್ದರು ಎಂದರೆ ಸರಿ. ಈ ಮೇಲೆ ಹೇಳಿದ ಆಸ್ತಿಗಳನ್ನು ಹೊರತುಪಡಿಸಿದರೆ ಬೇರೆ ಯಾವುದೇ ಆಸ್ತಿಗಳನ್ನು ನಮ್ಮ ತಂದೆಯ ಭಾಗಾಂಶಕ್ಕೆ ನೀಡಿರಲಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರಿದು ಪಾಂಡವಪುರದಲ್ಲಿ ಅಜ್ಜಪಾಲು ಇದೆ ಎಂದು ಹೇಳುತ್ತಾರೆ. ಈ ಮೇಲೆ ಹೇಳಿದ ಆಸ್ತಿಗಳನ್ನು ಮಾತ್ರ ನಮ್ಮ ತಂದೆಯ ಪಾಲಿಗೆ ನೀಡಿದ್ದು ಸದರಿ ಆಸ್ತಿಗಳೇ ನಿ ಡಿ 5 ರಲ್ಲಿನ ದಾಖಲೆಯಲ್ಲಿ ನಮೂದು ಆಗಿರುವ ಕಾರಣ ನಮ್ಮ ತಂದೆಯು ನ್ಯಾಯಾಲಯಕ್ಕೆ ಹಾಜರಾದರೆ ಮೂಲ ಪಾಲುಪಟ್ಟಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿ ಆ ದಾಖಲೆಯನ್ನು ಒಪ್ಪಿಕೊಳ್ಳಬೇಕಾಗುತ್ತದೆ ಎಂಬ ಕಾರಣದಿಂದ ನನ್ನ ಮೂಲಕ ಸಾಕ್ಷ್ಯ ನುಡಿಸುತ್ತಿದ್ದಾರೆ ಎಂದರೆ ಸರಿಯಲ್ಲ. ಈ ಮೇಲೆ ಹೇಳಿದ ಮಾರಾಟದ ವ್ಯವಹಾರಗಳನ್ನು ನನ್ನ ತಂದೆ, ತಾಯಿ ಮತ್ತು ನಾನು ಸ್ವಇಚ್ಛೆಯಿಂದ ನಡೆಸಿದ್ದೇವೆ ಎಂದರೆ ಸರಿ.

ನಮ್ಮ ತಂದೆಗೆ ಭಾಗಾಂಶ ನೀಡಿದ ಹಾಗೆ ನಮ್ಮ ಚಿಕ್ಕಪ್ಪವರಾದ 6 ನೇ ಪ್ರತಿವಾದಿ ನಾಗರಾಜೇಗೌಡರಿಗೂ ಸಹ ಚಿಕ್ಕ ಮಸೀದಿ ಬೀದಿಯಲ್ಲಿನ ಆರ್ ಸಿ ಸಿ ಮನೆಯಲ್ಲಿ ಪಶ್ಚಿಮಾರ್ಧ ಭಾಗ, ಹಿರೋಡೆ ಗ್ರಾಮದ ನೀಲಿಗದ್ದೆ ಪೂರ್ತಾ, ಚಂದ್ರೆ ಗ್ರಾಮದ ಜವರೇಗೌಡನ ಹೊಲದಲ್ಲಿ ಅರ್ಧ ಭಾಗ, ಕಣದ ಹೊಲದಲ್ಲಿ 1/3 ನೇ ಭಾಗ, ವಾಜನ ಹೊಲದಲ್ಲಿ 0.39 ಗುಂಟೆ ಜಮೀನು, ವಡ್ಡರಹಳ್ಳಿ ಬಾರೆ ಹೊಲದಲ್ಲಿ ಪಶ್ಚಿಮಾರ್ಧ ಭಾಗ, ಚಂದ್ರೆ ಗ್ರಾಮದ ಹಳೆಯ ಮನೆಯಲ್ಲಿ ಅರ್ಧ ಭಾಗ ನೀಡಿದ್ದಾರೆ ಎಂದರೆ ಸರಿ. ಚಂದ್ರೆ ಗ್ರಾಮದ ಉಳಿದ ಅರ್ಧ ಮನೆಯನ್ನು ಸಿ ಕೆ ದೇವೇಗೌಡರ ಭಾಗಾಂಶಕ್ಕೆ ನೀಡಿದ್ದು

ನಾಗರಾಜೇಗೌಡ ಹಾಗೂ ಸಿ ಕೆ ದೇವೇಗೌಡ ಇಬ್ಬರು ಸೇರಿ ಆ ಪೂರ್ತ ಹಳೆ ಮನೆಯನ್ನು ನಮ್ಮ ತಂದೆಗೆ ಬಿಟ್ಟುಕೊಟ್ಟರು ಎಂದರೆ ಸರಿಯಲ್ಲ. ನಮ್ಮ ತಂದೆಯು ತಮ್ಮ ಪಾಲಿನ ಹಳೆಯ ಮನೆಯನ್ನು ಮಂಜುನಾಥ ಎಂಬುವವರಿಗೆ ಮಾರಾಟ ಮಾಡಿದ್ದ ಕಾರಣ ನಮ್ಮ ಚಿಕ್ಕಪ್ಪಂದಿರಾದ ನಾಗರಾಜೇಗೌಡ ಹಾಗೂ ಸಿ ಕೆ ದೇವೇಗೌಡರವರು ತಮ್ಮ ಪಾಲಿನ ಶಿಥಿಲಗೊಂಡಿದ್ದ ಹಳೆಯ ಮನೆಯನ್ನು ನಮ್ಮ ತಂದೆಗೆ ಬಿಟ್ಟುಕೊಟ್ಟರು ಎಂದರೆ ಸರಿಯಲ್ಲ. ಸದರಿ ಜಾಗವನ್ನು ನಮ್ಮ ತಂದೆಯು ಶಿವಣ್ಣ ಎಂಬುವವರಿಂದ ಕ್ರಯಕ್ಕೆ ಪಡೆದುಕೊಂಡಿದ್ದಾರೆ.

ಅದೇ ರೀತಿ ನಮ್ಮ ದೊಡ್ಡಪ್ಪರವರಾದ ಸಿ ಕೆ ದೇವೇಗೌಡರಿಗೂ ಹೀರೋಡೆ ಗ್ರಾಮದ ಹಳ್ಳದ ಪಾಲು, ಅಣ್ಣಾಜಿ ಗದ್ದೆ, ಚಂದ್ರೆ ಗ್ರಾಮದ ವಡ್ಡರಹಳ್ಳಿ ಬಾರೆ ಹೊಲದಲ್ಲಿ ದಕ್ಷಿಣಾರ್ಧಾ ಭಾಗ, ಚಂದ್ರೆ ಗ್ರಾಮದ ಸಣ್ಣೇಗೌಡನ ಹೊಲ ಪೂರ್ತಾ, ಕಣದ ಹೊಲದಲ್ಲಿ 1/3 ನೇ ಭಾಗ, ಕಾಳಯ್ಯನ ಹೊಲ ಪೂರ್ತಾ, ಪಟ್ಟಲಮ್ಮನ ಹೊಲ, ಅರ್ಧ ಅಡಿಕೆ ತೋಟ, ಚಂದ್ರೆ ಗ್ರಾಮದ ಹಳೆಯ ಗ್ರಾಮ ಠಾಣಾ ಮನೆಯಲ್ಲಿ ಅರ್ಧ ಭಾಗ, ಚಿಕ್ಕ ಮಸೀದಿ ಬೀದಿಯಲ್ಲಿನ ಆರ್ ಸಿ ಸಿ ಮನೆಯಲ್ಲಿ ಪೂರ್ವಾರ್ಧ ಭಾಗ ನೀಡಲಾಗಿದೆ ಎಂದರೆ ಸರಿ.

ಈ ಮೇಲಿನಂತೆ ನೀಡಿರುವ ಭಾಗಾಂಶವನ್ನೇ ನಿಶಾನೆ ಡಿ 5 ರಲ್ಲಿನ ಪಂಚಾಯಿತಿ ಪಾಲುಪಟ್ಟಿಯಲ್ಲಿ ನಮೂದು ಮಾಡಲಾಗಿದೆ ಎಂದರೆ ಸರಿಯಲ್ಲ. ಅಜ್ಜಪಾಲು ಎಂದು ಉಳಿಸಿಕೊಂಡಿದ್ದ ಆಸ್ತಿಗಳು ಮರಣ ನಂತರ ಯಾವ ರೀತಿಯಲ್ಲಿ ವಿಲೇ ಆಗಬೇಕು ಎಂದು ನಿ ಡಿ 5 ರಲ್ಲಿ ಬರೆಯಲಾಗಿದೆ ಎಂದರೆ ಸರಿಯಲ್ಲ. ನಿಶಾನೆ ಡಿ 5 ರಲ್ಲಿನ ಸಂಗತಿಗಳ ಪ್ರಕಾರ ಸಣ್ಣಮ್ಮ ಹಾಗೂ ಕರೀಗೌಡರವರ ಮರಣ ನಂತರ ನಮ್ಮ ತಂದೆ ವೆಂಕಟೇಶರವರ ಅನುಭವಕ್ಕೆ ಪಾಂಡವಪುರ ಟೌನ್ ಚಿಕ್ಕಮಸೀದಿ ಬೀದಿಯಲ್ಲಿರುವ ಮದ್ರಾಸ್ ಆರ್ ಸಿ ಸಿ ಮಂಗಳೂರು ಹೆಂಚಿನ ಮನೆ ಪೂರ್ತಾ ಮತ್ತು ಸರ್ವೆ ನಂ. 72 ರಲ್ಲಿ 06 ಗುಂಟೆ ಜಮೀನು ಸೇರತಕ್ಕದ್ದು ಎಂದು ಬರೆಯಲಾಗಿದೆ ಎಂದರೆ ಸರಿಯಲ್ಲ. ಅದೇ ರೀತಿ ಇನ್ನುಳಿದ ಅಜ್ಜಪಾಲು ಸ್ವತ್ತುಗಳಾದ ಸರ್ವೆ ನಂ. 75 ರಲ್ಲಿ 0.41 ಎರಸ್ ಹಾಗೂ ಸರ್ವೆ ನಂ. 72 ರಲ್ಲಿ

0.31 ಎರಸ್ ಜಮೀನು ಸಮನಾಗಿ ಸಿ ಕೆ ದೇವೇಗೌಡ ಮತ್ತು ಕೆ ನಾಗರಾಜೇಗೌಡರವರ ನಡುವೆ ಹಂಚಿಕೆಯಾಗತಕ್ಕದ್ದು ಎಂದು ಬರೆಯಲಾಗಿದೆ ಎಂದರೆ ಸರಿಯಲ್ಲ. ಈಗ ಆ ಜಮೀನುಗಳ ಪೈಕಿ 06 ಗುಂಟೆ ಮತ್ತು 24 ಗುಂಟೆ ಜಮೀನು ಪಾಂಡವಪುರದ ಒಳಚರಂಡಿ ಯೋಜನೆಗೆ ಭೂಸ್ವಾಧೀನಗೊಂಡಿದೆ ಎಂದರೆ ಸರಿ. ಅದಕ್ಕೆ ಪರಿಹಾರವಾಗಿ ರೂ. 3 ಕೋಟಿ ಹಣವನ್ನು ಸಿ ಕೆ ದೇವೇಗೌಡರು ಪಡೆದುಕೊಂಡಿದ್ದಾರೆ ಎಂದರೆ ದಾಖಲೆಗಳು ಅದಲು ಬದಲು ಆಗಿರುವ ಕಾರಣ ಆ ಹಣವು ಮುನಿಸಿಪಾಲಿಟಿ ಆಪೀಸ್‌ನಲ್ಲೆ ಇದೆ. ಒಳಚರಂಡಿಗೆ ಹೋಗಿರುವ 06 ಗುಂಟೆ ಜಮೀನಿಗೆ ಸಂಬಂಧಿಸಿದ ರೂ. 60 ಲಕ್ಷ ಪರಿಹಾರದ ಹಣವನ್ನು ನಿ ಡಿ 5 ರಲ್ಲಿನ ಪಂಚಾಯಿತಿ ಪಾಲುಪಟ್ಟಿ ಪ್ರಕಾರ ನಾವೇ ಪಡೆದುಕೊಳ್ಳಲು ಯಾವುದೇ ಆಕ್ಷೇಪಣೆ ಇಲ್ಲ ಎಂದು 6 ನೇ ಪ್ರತಿವಾದಿ ತನ್ನ ಪ್ರತಿವಾದ ಪತ್ರದಲ್ಲಿ ಹೇಳಿದ್ದಾರೆ ಎಂದರೆ ಸರಿಯಲ್ಲ. ನಿ ಡಿ 5 ರಲ್ಲಿನ ಪಾಲುಪಟಿಟ ಪ್ರಕಾರ ಜಮೀನುಗಳು ಈಗಾಗಲೇ ಹಂಚಿಕೆಯಾಗಿದ್ದರೂ ಸಹ ರೂ. 2 ಕೋಟಿ 40 ಲಕ್ಷ ಭೂ ಪರಿಹಾರದ ಹಣದಲ್ಲಿ ಸಮಪಾಲು ಬರಬೇಕು ಎಂದು ಹೇಳಿ ವಿಭಾಗವು ಮೌಖಿಕವಾಗಿ ಆಗಿದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಸಿ ಕೆ ವೆಂಕಟೇಶ ಎಂದರೆ ನನ್ನ ತಂದೆ. ಸಿ ವಿ ಭವ್ಯ ಎಂದರೆ ನಾನು. ಸಿ ವಿ ರಜನಿ ಎಂದರೆ ನನ್ನ ತಂಗಿ. ಸಿ ವಿ ತುಳಸಿ ಎಂದರೆ ನನ್ನ ತಂಗಿ. ಬಿ ಜಿ ಗೋಪಾಲ ಎಂದರೆ ನನ್ನ ತಂದೆಯ ಸಂಬಂಧಿಕರು. 6 ನೇ ಪ್ರತಿವಾದಿಯ ಮಗಳನ್ನೇ ಸದರಿ ಬಿ ಜಿ ಗೋಪಾಲರವರ ಮಗನಿಗೆ ಮದುವೆ ಮಾಡಿಕೊಟ್ಟಿದ್ದಾರೆ ಎಂದರೆ ಸರಿ. ನನ್ನ ತಂಗಿ ತುಳಸಿಯು ಅಸಲು ದಾವೆ 86/2014 ರ ರೀತ್ಯಾ ನಮ್ಮ ತಂದೆ, ನನ್ನ ತಂಗಿ, ಬಿ ಜಿ ಗೋಪಾಲ ಹಾಗೂ ನನ್ನ ವಿರುದ್ಧ ದಾವೆ ಹೂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಆ ದಾವೆಯಲ್ಲಿ ನನಗೆ ಯಾವುದೇ ನೋಟೀಸು ಜಾರಿಯಾಗಿಲ್ಲ. ನಮ್ಮ ತಂದೆಗೆ ನೋಟೀಸು ಜಾರಿಯಾಗಿದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ನನ್ನ ತಂಗಿ ಯಾವ ಕಾರಣಕ್ಕೆ ಏನು ಕೇಸು ಹಾಕಿದ್ದಾರೆ ಎಂದು ನಾನು ತಿಳಿದುಕೊಂಡಿಲ್ಲ. ನಮ್ಮ ತಂದೆಯು ದುಶ್ಚಟಗಳಿಗೆ ಬಲಿಯಾಗಿ ಬೇಜವಾಬ್ದಾರಿಯಿಂದ

ನಡೆದುಕೊಳ್ಳುತ್ತಿದ್ದರು. ನಾನು ಹಾಗೂ ನಮ್ಮ ತಂದೆ ಮತ್ತು ಕುಟುಂಬದ ಎಲ್ಲರೂ ಸೇರಿ ಕ್ರಯಪತ್ರಗಳನ್ನು ಮಾಡಿಕೊಟ್ಟಿದ್ದೇವೆ ಎಂದರೆ ಕೆಲವು ಕ್ರಯಪತ್ರಗಳಿಗೆ ನಾನು ಸೇರಿಸಿಲ್ಲ. ಈ ದಾವೆ ಹೂಡಿದ ಕಾಲದಲ್ಲಿ ನಮ್ಮ ತಂದೆ ವಿಷಯಲಂಪಟ ಎಂದಾಗಲೀ, ದುಶ್ಚಟಗಳಿಗೆ ಬಲಿಯಾಗಿ ಬೇಜವಾಬ್ದಾರಿ ಹೊಂದಿದ್ದಾರೆ ಎಂದಾಗಲೀ ದಾವಾ ಪತ್ರದಲ್ಲಿ ಹೇಳಿಲ್ಲ. ಸಾಕ್ಷಿ ಮುಂದುವರಿದು ಪ್ರತಿವಾದಿಗಳು ಮೋಸ ಮಾಡಿದ ನಂತರ ಬುದ್ದಿ ಕಲಿತುಕೊಂಡಿದ್ದಾರೆ ಹಾಗೂ ಅಪಘಾತದ ನಂತರ ಎಲ್ಲವನ್ನು ಬಿಟ್ಟು ಚೆನ್ನಾಗಿದ್ದಾರೆ ಎಂದು ಹೇಳುತ್ತಾರೆ. ಸುಮಾರು 10 ವರ್ಷಗಳಿಂದ ನನ್ನ ತಂದೆ ಒಳ್ಳೆಯವರಾಗಿದ್ದಾರೆ. ನನಗೆ ಬುದ್ದಿ ಬಂದಾಗಿನಿಂದ ನನ್ನ ಮದುವೆಯಾಗುವವರೆಗೂ ನಮ್ಮ ತಂದೆ ಚನ್ನಾಗಿದ್ದರು, ಆಮೇಲೆ ಸ್ವಲ್ಪ ಹಾಳಾಗಿದ್ದರು. ನಮ್ಮ ತಂದೆ ಒಳ್ಳೆಯ ವ್ಯಕ್ತಿಯಾಗಿದ್ದರೂ ಸಹ ಮತ್ತು ನನ್ನ ತಂಗಿ ಹೂಡಿರುವ ದಾವೆಯ ಬಗ್ಗೆ ನನಗೆ ಗೊತ್ತಿದ್ದರೂ ಸಹ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂಗಿಯು ಅಸಲು ದಾವೆ 86/2014 ನ್ನು ವಿಭಾಗಕ್ಕಾಗಿ ಹೂಡಿದ್ದಾರೆ ಎಂದರೆ ಅವರು ಕೇಸು ಹಾಕಿದ್ದಾರೆ ಆದರೆ ಆ ಕೇಸಿನ ಬಗ್ಗೆ ಏನೂ ಗೊತ್ತಿಲ್ಲ. ನನಗೆ ಆ ದಾವೆಯಲ್ಲಿ ನೋಟೀಸು ಜಾರಿಯಾಗಿಲ್ಲ. ಆದರೆ ನಮ್ಮ ತಂದೆ ಆ ಕೇಸನ್ನು ನನ್ನ ತಂಗಿ ಹಾಕಿರುವ ಬಗ್ಗೆ ನನಗೆ ಹೇಳಿದ್ದರು. 2014 ರ ಪೂರ್ವದಲ್ಲಿಯೇ ನನ್ನ ಅಜ್ಜ ಮತ್ತು ಅಜ್ಜಿ ಮರಣ ಹೊಂದಿದ್ದರು ಎಂದರೆ ಸರಿ. ಅಜ್ಜಪಾಲಿನ ಸ್ವತ್ತುಗಳು ನಿ ಡಿ 5 ರಲ್ಲಿನ ಪಂಚಾಯಿತಿ ಪಾಲುಪಟ್ಟಿ ಪ್ರಕಾರ ವಿಲೇ ಆಗಿದ್ದ ಕಾರಣ ನನ್ನ ತಂಗಿಯು ಅಸಲು ದಾವೆ ಸಂಖ್ಯೆ 86/2014 ರಲ್ಲಿ ನಮ್ಮ ತಂದೆಯ ಪಾಲಿನ ಸ್ವತ್ತುಗಳನ್ನು ಮಾತ್ರ ಸೇರಿಸಿ ಭಾಗಾಂಶಕ್ಕಾಗಿ ದಾವೆ ಹೂಡಿದ್ದರು ಎಂದರೆ ಸರಿಯಲ್ಲ. ನನಗೆ ಆ ದಾವೆಯ ಬಗ್ಗೆ ಗೊತ್ತಿದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಿಭಾಗ ಆದ ನಂತರವೂ ಸಹ ನಮ್ಮ ತಂದೆ ಅವರ ಒಡಹುಟ್ಟಿದವರ ಜೊತೆ ವ್ಯವಹರಿಸುತ್ತಿದ್ದರು ಎಂದರೆ ಸರಿಯಲ್ಲ. ನಮ್ಮ ತಂದೆಯು ತನ್ನ ಒಡಹುಟ್ಟಿದವರರೊಂದಿಗೆ ಸೇರಿಕೊಂಡು ಫೈಲ್ವಾನ್ ಸಿದ್ದೇಗೌಡರ ಮಕ್ಕಳೊಂದಿಗೆ ದಿನಾಂಕ 14.08.1986 ರಂದು ಸ್ವತ್ತುಗಳ ವರ್ಗಾವರ್ಗಿ ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಆ ವರ್ಗಾವರ್ಗಿ ಮೇರೆಗೆ ಪಾಂಡವಪುರ ಟೌನ್

ನ ಸರ್ವೆ ನಂ. 35/3 ಎ ರಲ್ಲಿ 35 ಗುಂಟೆ ಮತ್ತು ಸರ್ವೆ ನಂ. 35/3 ಎಪಿ3 ರಲ್ಲಿ 05 ಗುಂಟೆಯನ್ನು ನಮ್ಮ ತಂದೆಗೆ ಬರೆದುಕೊಟ್ಟಿದ್ದರು ಎಂದರೆ ಸರಿಯಲ್ಲ. ಪಾಂಡವಪುರದ ಕ್ರೈಸ್ತರ ಸ್ಮಶಾನದ ಪಕ್ಕದಲ್ಲಿರುವ ಸರ್ವೆ ನಂ. 35/3 ಎ ರಲ್ಲಿನ 35 ಗುಂಟೆ ಮತ್ತು ಸರ್ವೆ ನಂ. 35/3 ಎಪಿ3 ರಲ್ಲಿ 05 ಜಮೀನು ನಮ್ಮ ತಂದೆಗೆ ಭಾಗಾಂಶದಲ್ಲಿ ಬಂದಿರುವ ಜಾಗವಾಗಿರದೆ ಸ್ವಯಾರ್ಜಿತವಾಗಿದೆ ಎಂದರೆ ಸರಿ. ನಮ್ಮ ತಂದಯು ತಮ್ಮ ಸ್ವಂತ ಬುದ್ದಿವಂತಿಕೆಯಿಂದಲೇ ಸಂಪಾದಿಸಿದ್ದಾರೆ ಎಂದರೆ ಸರಿ. ಈಗ ಆ ಜಮೀನು ಪಾಂಡವಪುರ ಸಭಾ ವ್ಯಾಪ್ತಿಯಲ್ಲಿ ಸೇರಿಕೊಂಡು ನಿವೇಶನಗಳಾಗಿ ಪರಿವರ್ತನೆಗೊಂಡಿದೆ ಎಂದರೆ ನನಗೆ ಗೊತ್ತಿಲ್ಲ. ಆ ಜಮೀನನ್ನು ನಮ್ಮ ಮದುವೆಯ ಖರ್ಚಿಗಾಗಿ ನಮ್ಮ ತಂದೆಯು ಬಿ ಜಿ ಗೋಪಾಲರವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ಹಾಗೆ ಮಾರಾಟ ಮಾಡಿರುವ ಸಂಗತಿ ಗೊತ್ತಿಲ್ಲ ಎಂದು ಹೇಳಿ ನನ್ನ ತಂಗಿಯ ಕೈಯಲ್ಲಿ ಭಾಗಾಂಶಕ್ಕೆ ಅಸಲು ದಾವೆ ಸಂಖ್ಯೆ86/2014 ನ್ನ ಹೂಡಿಸಿ ನನ್ನ ಕೈಯಲ್ಲಿ ಈ ದಾವೆಯಲ್ಲಿ ಸಾಕ್ಷ್ಯ ನುಡಿಯಲು ನನ್ನನ್ನು ಕಳುಹಿಸಿ ನಮ್ಮ ತಂದೆ ನಮ್ಮ ಹಿಂದೆ ಕುಳಿತುಕೊಂಡಿದ್ದಾರೆ ಎಂದರೆ ಸರಿಯಲ್ಲ. ಬಿ ಜಿ ಗೋಪಾಲರವರಿಗೆ ಮಾರಾಟ ಮಾಡಿರುವ ಜಮೀನು ಹಾಗೂ ಈ ದಾವೆಯ ಜಮೀನುಗಳು ಕೋಟ್ಯಾಂತರ ರೂಪಾಯಿ ಬೆಲೆ ಬಾಳುತ್ತದೆ ಎಂಬ ಕಾರಣದಿಂದ ಆ ಜಮೀನುಗಳಿಗೆ ಸಂಬಂಧಿಸಿದಂತೆ ಒಂದು ದಾವೆ, ಈ ಜಮೀನುಗಳಿಗೆ ಸಂಬಂಧಿಸಿದಂತೆ ಒಂದು ದಾವೆ ಹಾಕಿಕೊಂಡಿದ್ದೇವೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**(ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ)**

**ಸಾ ಓ ಹೇ ಸ ಒ**

**(ಬಾಬು ಎನ್)**
**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಪಾಂಡವಪುರ**